# ಕಂಪು ಕಂನಡಿಗರ ಪಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ಯುಗಾದಿ ಸಂಚಿಕೆ

Newsletter of MKANT
Yugadi 2015


www.mallige.org


## ಈ ಸಂಚಿಕೆಯಲ್ಲಿ


| | |
|---|---|
| ದೀಪಾವಳಿಯ ಸಡಗರ | 1 |
| MKANT Stars | 3 |
| ಅಧ್ಯಕ್ಷರ ಸಂದೇಶ | 4 |
| ಸಂಪಾದಕೀಯ | 5 |
| ಸಂಕ್ರಾಂತಿ | 5 |
| ವಿಚಿತ್ರ ಹರಾಜು | 6 |
| ಹನಿಗವನ | 6 |
| ಕವಿನಮನ | 7 |
| Drawings | 8 |
| ಕನ್ನಡ ಕಲಿ | 9 |
| ಪತ್ರಗಳು | 10 |
| Kids Corner | 11 |
| ಪಾಕಂಪಪ್ಪು | 12 |


## ದೀಪಾವಳಿಯ ಸಡಗರ

- ರೇಖಾ ಪ್ರಕಾಶ್



ಮಲ್ಲಿಗೆ ಕನ್ನಡ ಸಂಘದ ೧೦ನೇ ವಾರ್ಷಿಕೋತ್ಸವ ಸಮಾರಂಭ, ದೀಪಾವಳಿಯ ಸಡಗರ ಮತ್ತು ಕನ್ನಡ ರಾಜ್ಯೋತ್ಸವದ ಆಚರಣೆಯನ್ನು ಗ್ರಾನ್‌ವಿಲ್ ಆರ್ಟ್ ಸೆಂಟರ್‌ನಲ್ಲಿ ನಡೆಸಿದುದರ ಒಂದು ಪಕ್ಷಿನೋಟ.

ಮಲ್ಲಿಗೆ ಕನ್ನಡ ಸಂಘ ನಾರ್ತ್ ಟೆಕ್ಸಾಸ್ ೧೦ ಸಂತಸದ ಸಂವತ್ಸರಗಳನ್ನು ಕಳೆದು ೧೧ನೇ ವರ್ಷಕ್ಕೆ ಕಾಲಿಟ್ಟದ್ದು ಸಂತಸದ ಸಂಗತಿ. "ಬೆಳಗೀ ನಮ್ಮೀ ದೀವಿಗೆ, ಕಳೆಯ ಚೆಲ್ಲುತೆಲ್ಲಾ ತಾವಿಗೆ, ಬೆಳಕಿನಾ ತೆನೆ ನಲವಿನಾ ನೆನೆ, ಸಿರಿಗೆ ತವರೆಮ್ಮಮನೆ" ಎಂಬ ಕವಿಯೋಕ್ತಿಯಂತೆ ದೀಪಾವಳಿಯ ದೀಪೋತ್ಸವವನ್ನು ವರ್ಣರಂಜಿತವಾಗಿ ಅಲಂಕರಿತ ಮಂಟಪದಲ್ಲಿ, ಸಾಲು ಸಾಲು ಹಣತೆದೀಪಗಳನ್ನು ಬೆಳಗಿ, "ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿನುಡಿಯ ದೀಪ, ಒಲವೆತ್ತಿ ತೋರುವಾ ದೀಪ" ಎಂದು ಹಾಡುತ್ತಾ ನಮ್ಮ ಮಲ್ಲಿಗೆ ಕನ್ನಡ ಸಂಘ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ಸಂಭ್ರಮದಿಂದ ಆಚರಿಸಿತು.

ಅತಿ ಸೊಗಸಾಗಿ ಅಲಂಕೃತಗೊಂಡ ಹಣತೆ ದೀಪಗಳ ಬೆಳಕು ದೀಪಾವಳಿಯ ಸಂಜೆಗೆ ರಂಗೇರಿಸಿ, ಸಂತಸದ ಶುಭ ದಿನದ ಆನಂದವನ್ನು ಉತ್ತುಂಗಕ್ಕೇರಿಸಿತ್ತು. ಬಣ್ಣ ಬಣ್ಣದ ವಿವಿಧ ವೇಷಭೂಷಣಗಳನ್ನು ಧರಿಸಿಕೊಂಡು, ನಕ್ಕು ನಲಿಯುತ್ತಿದ್ದ ಚೆಣ್ಣರ ಸೊಬಗು, ಸಂಭ್ರಮದ ಅಲೆಯಲ್ಲಿ ಮುಳುಗಿಹೋಗಿದ್ದ ಯುವಕ ಯುವತಿಯರ ಸಡಗರ, ಹಬ್ಬದ ರಸದೌತಣ ಸವಿದು ಸಂತಸದಿಂದಿದ್ದ ಹಿರಿಯರು; ಎಲ್ಲರೂ ಜೊತೆಗೂಡಿ ಎಲ್ಲೆಲ್ಲೂ ಸಂತೋಷ, ಮಲ್ಲಿಗೆಯ ಪರಿಮಳ ಹರಡಿದ ಆ ವಾತಾವರಣದಲ್ಲಿ ನೆರವೇರಿದ ಸಂಘದ ಹುಟ್ಟುಹಬ್ಬಕ್ಕೆ, ಹೊಸ ರಂಗು , ಹೊಸ ಚೇತನ ತಂದಿತ್ತು. ಕನ್ನಡ ಅಭಿಮಾನದ ಧ್ವಜವನ್ನು ಎತ್ತಿಹಿಡಿದು ವಂದನೆ ಸಲ್ಲಿಸಿ, "ಹೊತ್ತಿತೋ ಹೊತ್ತಿತು ಕನ್ನಡ ದೀಪ, ಬೆಳಗಿತೋ ಬೆಳಗಿತು ಕರುನಾಡ ದೀಪ"ವೆಂದು, ಅಮೆರಿಕೆಯ ಟೆಕ್ಸಾಸ್‌ನಲ್ಲಿ ಜ್ಯೋತಿ ಬೆಳಗಿಸಲು ಸಜ್ಜಾದ




ಸಂಘದ ಸದಸ್ಯರುಗಳ ಹುರುಪು, ಹಿರಿ ಕಿರಿಯರೆಂಬ ಬೇಧವಿಲ್ಲದೆ ಎಳ್ಳು ಬೆಲ್ಲದಂತೆ ಜೊತೆಗೂಡಿ ಕಳೆದ ಆ ಮಧುರ ಸಂಜೆ ಹೊಸ ವರುಷದತ್ತ ಕಾಲಿಡುವ ಹೊಸ ಹೆಜ್ಜೆಗೆ ಸ್ಫೂರ್ತಿದಾಯಕವಾಗಿತ್ತೆಂದರೆ ಖಂಡಿತ ತಪ್ಪಾಗಲಾರದು. "ಹೊಸ ವರುಷಕೆ ಹೊಸ ಹರುಷವ ಹೊಸೆದು ಹೊಸೆದು ತರುತ್ತಿರುವ ಮಲ್ಲಿಗೆ ಕನ್ನಡ ಸಂಘಕ್ಕೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು".



ಮಲ್ಲಿಗೆ ತಂಡವು ತನ್ನ ೧೦ನೇ ಹುಟ್ಟುಹಬ್ಬ, ಕನ್ನಡ ರಾಜ್ಯೋತ್ಸವ, ದೀಪಾವಳಿ ಹಬ್ಬ ಎಲ್ಲವನ್ನೂ ಒಟ್ಟುಗೂಡಿಸಿದ ಆ ರಸ ಸಂಜೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅತ್ಯಂತ ಸಂತಸದ ಸಂಗತಿ. ಅತಿ ಚಿಕ್ಕ ಪುಟಾಣಿ ಕಂದಮ್ಮಗಳ "ಕೃಷ್ಣನ ಗೋಪಿಯರು" ಎಂಬ ಅತೀಸುಂದರ ನೃತ್ಯದಿಂದ ರಸಸಂಜೆ ಕಾರ್ಯಕ್ರಮ ಶುರುವಾದಾಗ ಎಲ್ಲರಿಗೂ ಆದ ಸಂತಸ ವರ್ಣಿಸಲಸಾಧ್ಯ. ಮುದ್ದುಮಕ್ಕಳ ಮುದ್ದುಮುಖದ ಹಿಂದಿದ್ದ ತನ್ಮಯತೆ, ಆತ್ಮವಿಶ್ವಾಸ, ಪರಿಪೂರ್ಣತೆಯನ್ನು ನೋಡಿ ಹಿರಿಯರು ಆಶ್ಚರ್ಯಚಕಿತವಾದರು. ಕೃಷ್ಣನ ಗೋಪಿಯರು, ಬೊಂಬೆ ಆಟ, ಜುಗಲ್ಬಂದಿ, ನಮ್ಮ ಕರುನಾಡು, ನೃತ್ಯಸಂಗಮ, ಎಲ್ಲೋ ಜಿನುಗಿರುವ ಮುಂತಾದ ರಮಣೀಯ



ನೃತ್ಯಗಳು, ಗುರುಶಿಷ್ಯರು, ಭೂಮಿಗೆ ಬಂದ ಭಗವಂತ, ಸೂಪರ್ ಹಿಟ್ ಸಿನಿಮಾ ಶೂಟಿಂಗ್, ಮನೆ ಮನೆ ದೀಪಾವಳಿ ಮುಂತಾದ ಮನರಂಜನಾ ನಾಟಕಗಳು, ಹಿರಿಯ ಸದಸ್ಯರುಗಳಿಂದ ಅಮೋಘ ಕೋಲಾಟ, ಮಾಯದಂಥ ಮಳೆ ಬಂತಣ್ಣ ಕಣ್ಣಿಗೆ ಹಬ್ಬದಂತಿದ್ದು ಜನರ ಮೆಚ್ಚುಗೆ ಗಳಿಸಿತು.ಇದೇ ಸಭಾಂಗಣವನ್ನು ನಡುಗಿಸುವ ವಾತಾವರಣ ತಂದು ಸಭಿಕರ ಮನಗೆದ್ದು, ಕಿವಿಗಪ್ಪಳಿಸುವ ಚಪ್ಪಾಳೆಗಿಟ್ಟಿಸಿ ಸಂಭ್ರಮದ ವಾತಾವರಣ ಸೃಷ್ಟಿಸಿದ "ಡೊಳ್ಳುಕುಣಿತ" ಆ ಮಧುರ ಸಂಜೆಗೆ ರಂಗೇರಿಸಿತು. ಸದಸ್ಯರುಗಳ ಉತ್ಸಾಹ ಉತ್ತುಂಗದ ಶಿಖರವೇರಿ, ಅವರ ಸಾಧನೆಯ ಪ್ರತೀಕವಾಗಿ ಇದು ತಮ್ಮ ಸಂಘದ ಅತ್ಯುಲ್ಲಾಸದ ಸಮಯವಾಗಿತ್ತು ಎಂದು ಸಾದರಪಡಿಸಿತ್ತು.





"ಕನ್ನಡಕೆ ಹೋರಾಡು ಕನ್ನಡದ ಕಂದಾ, ಕನ್ನಡವ ಕಾಪಾಡು ನಮ್ಮ ಆನಂದ" ಅನ್ನುವ ಹಾಗೆ ಹೊರದೇಶದಲ್ಲಿ ಕನ್ನಡದ ಬಾವುಟವನ್ನು ಉತ್ತುಂಗಕ್ಕೇರಿಸುವ ದಿಶೆಯಲ್ಲಿ, "ಬೆಳಗು ಬಾ ಹಣತೆಯನು" ಈ ನಮ್ಮ ಟೆಕ್ಸಾಸ್‌ನಲ್ಲಿ ಎಂದು ದೀಪಾವಳಿಯ ಬೆಳಕಿನ ಜ್ಯೋತಿಯನ್ನು ಬೆಳಗಿತು.

"ತೆರೆದಿದೆ ಮನೆ ಓ ಬಾ ಅತಿಥಿ, ಹೊಸದೇಶದ ಹೊಸರಾಜ್ಯದ ಹೊಸ ಹಾದಿಯ ಬಳಿಗೆ" ಎನ್ನುವಂತೆ, ಕನ್ನಡದ ಹೊಸ ಪೀಳಿಗೆಯ ಸುಂದರ ಮಧುರಧ್ವನಿಯ ಹಿನ್ನೆಲೆ ಗಾಯಕಿ ಸಿಂಚನ್ ದೀಕ್ಷಿತ್ ಮತ್ತು ಕನ್ನಡದ ಹೆಮ್ಮೆಯ ಮ್ಯಾಜಿಕ್ ಚತುರ ಶ್ರೀ ಕೌಶಿಕ್ ಅವರನ್ನು ದೂರದ ಕರ್ನಾಟಕದಿಂದ ಮಲ್ಲಿಗೆಯ ಕಂಪು ಸವಿಯಲು ಕರೆಸಿದ್ದು ಹೆಮ್ಮೆಯ ವಿಷಯವಾಗಿತ್ತು. ಕೌಶಿಕ್ ಅವರ ಮ್ಯಾಜಿಕ್ ಮೋಡಿಗೆ ಮುಗ್ಧರಾಗಿ ಉತ್ಸುಕತೆಯ ಶಿಖರವೇರಿದ ಚಿಣ್ಣರು, ಕುಣಿದು ಕುಪ್ಪಳಿಸಿ ಚಪ್ಪಾಳೆಯ ಮಳೆ ಸುರಿಸಿದರು.

ಆ ಕರತಾಡನಗಳ ವರ್ಷಧಾರೆ ಸಭೆಯಲ್ಲಿ ಪ್ರತಿಧ್ವನಿಸುತ್ತಿತ್ತು. ಇನ್ನು ಸಿಂಚನ್ ದೀಕ್ಷಿತ್ ಅವರು ತಮ್ಮ ಮಧುರ ಕಂಠದಲ್ಲಿ ಮರೆಯಲಾರದ ನಮ್ಮ ನೆಚ್ಚಿನ ಹಳೆಯ ಚಿತ್ರಗೀತೆಗಳನ್ನು ಸುಂದರವಾಗಿ ಹಾಡಿ ಸಭಿಕರ ಮನ ಗೆದ್ದರು. ಹಾಗೂ ನಿಸ್ಸಂಕೋಚವಾಗಿ ಎಲ್ಲರೊಡಗೂಡಿ ಬೆರೆತು, ನಕ್ಕುನಲಿದು ಸಂತೋಷ ಹಂಚಿಕೊಂಡಿದ್ದು ಆಶ್ಚರ್ಯ ತರಿಸಿತ್ತು.

ಇದೆ ಸಂದರ್ಭದಲ್ಲಿ ಸಂಘದ ಹಿರಿಯ ಅಧ್ಯಕ್ಷರುಗಳನ್ನು ಸನ್ಮಾನಿಸಲಾಯಿತು. ಸಂಘದ ಮುನ್ನಡೆಗೆ ಕಾರಣರಾದ ಅವರ ಮಾತೃಭಾಷಾಪ್ರೇಮ, ಕಲಾಪ್ರೇಮ, ಸೇವಾ ಮನೋಭಾವ, ಸ್ನೇಹಭಾವ ಎಲ್ಲವನ್ನೂ ಬರೆಯಲು ಪದಗಳೇ ಸಾಲದು. ತಮ್ಮ ದಿನನಿತ್ಯದ ವೇಗದ ಜೀವನದಲ್ಲಿ ಸ್ವಲ್ಪ ಬಿಡುವುಮಾಡಿಕೊಂಡು, ಸಂಘದ ಉನ್ನತಿಗೆ ಶ್ರಮಿಸಿದ್ದಾರೆ. ಈ ಉನ್ನತಿಗೆ ಕಾರಣರಾದ ನಮ್ಮ ಹೆಮ್ಮೆಯ ಡಾ॥ಕಲ್ಪನಾ ರಾವ್, ಕೃಷ್ಣರಾವ್, ವೆಂಕಟೇಶ್ ಮೇಲ್ಕೋಟೆ, ರವಿ ಮೇಲ್ಗಿರಿ, ಶ್ರೀವತ್ಸ ರಾಮನಾಥನ್, ಮೀನಾ ಭಾರದ್ವಾಜ್, ಸುಧೀಂದ್ರ ಪ್ರಹ್ಲಾದನ್, ಮಧು ಶಾಸ್ತ್ರಿ, ರಾಜಶ್ರೀ ರಮೇಶ್, ಜಯಶ್ರೀ ಮೂರ್ತಿ, ಡಾ॥ರಾಮ್‌ರಾವ್, ರೇವತಿ ಸತ್ಯ, ಸುಮಾ ಕುಲಕರ್ಣಿ ಅವರಿಗೆ ನಮ್ಮ ಗೌರವಪೂರ್ವಕ ವಂದನೆಗಳು.


ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲು ತಮ್ಮ ಸಂಪೂರ್ಣ ಸಹಕಾರ ಕೊಟ್ಟ ಕೀರ್ತಿ ನಮ್ಮ ಅಧ್ಯಕ್ಷರಾದ ಶ್ರೀಮತಿ ವಿದ್ಯಾ ದತ್ತ ಅವರಿಗೆ ಸಲ್ಲುತ್ತದೆ. ಅದಲ್ಲದೆ ಪರೋಕ್ಷವಾಗಿ ಕನ್ನಡ ಸಂಘದ ಪ್ರತಿಹೆಜ್ಜೆಯಲ್ಲೂ ಹೆಜ್ಜೆ ಇತ್ತು ಸಂಘದ ಉನ್ನತಿಗೆ ಸಹಕರಿಸುತ್ತಿರುವ ಎಲ್ಲ ಕನ್ನಡ ಬಂಧು ಬಳಗದವರಿಗೆ ಹೃದಯ ತುಂಬಿದ ಅಭಿನಂದನೆಗಳು. ದೀಪಾವಳಿಯ ರಂಗುರಂಗಿನ ಹಣತೆಗಳನ್ನು ಮತ್ತು ಸುಂದರ ವರ್ಣರಂಜಿತ ಸಭಾಂಗಣದ ಅಲಂಕಾರ ಮಾಡಿ ಸುಂದರ ಕಿನ್ನರಲೋಕ ಸೃಷ್ಟಿಸಿದ ಕೀರ್ತಿ ನಮ್ಮ ಹೆಮ್ಮೆಯ ಸದಸ್ಯರಾದ ಲತಾ ಮತ್ತು ರವಿಯವರಿಗೆ ಸಲ್ಲುತ್ತದೆ.

ಪ್ರತಿ ಕಾರ್ಯಕ್ರಮಕ್ಕೆ ಮುನ್ನುಡಿ ಕೊಟ್ಟು, ಸಭಿಕರ ಮನಸ್ಸಿನಲ್ಲಿ ಉತ್ಸುಕತೆಯನ್ನು ಹುಟ್ಟಿಸಿ, ಕುತೂಹಲದಿಂದ ಕಾರ್ಯಕ್ರಮವನ್ನು ಎದುರುನೋಡುವಂತೆ ಮಾಡಿ, ಉತ್ತಮವಾಗಿ ನಿರೂಪಿಸಿದ ಕೀರ್ತಿ ರಜಿನಿ ರವಿ ಮತ್ತು ಮಮತಾ ವಿಜಯ್ ಅವರಿಗೆ ಸಲ್ಲುತ್ತದೆ. ಸಡಗರದ ದೀಪಾವಳಿಯ ದೀಪಜ್ಯೋತಿಯನ್ನು ಬೆಳಗಿ, ಮಧುರ ಸಂಗೀತದ ನಾದದಿಂದ ಕೂಡಿದ ಕನ್ನಡದ ನಡೆ-ನುಡಿಯ ಪ್ರತೀಕವನ್ನು ಎತ್ತಿಹಿಡಿದು ಸಂಘದ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದ ರೀತಿ ಅವಿಸ್ಮರಣೀಯ.



# ಕಂಡೆ ನಾ MKANT ನಕ್ಷತ್ರಗಳನಾ...!!!

- ನಾಗಶ್ರೀ ಶ್ರೀನಿವಾಸ್



ಫೆಬ್ರವರಿ 14ರ ವಿಶೇಷತೆ ಏನು ಗೊತ್ತಾ? ಅದು ಪ್ರೇಮಿಗಳ ದಿನ ಅಂದ್ರಾ? ಬರೀ ವ್ಯಾಲೆಂಟೈನ್ಸ್ ಡೇ ಮಾತ್ರ ಅಲ್ಲ, ಅದು ಈ ವರ್ಷದ "MKANT Got Talent" ದಿನ ಕೂಡ. ನಮ್ಮ ಮಲ್ಲಿಗೆ ಕನ್ನಡ ಸಂಘದ ಪ್ರತಿಭಾವಂತ ಮಕ್ಕಳು ಮತ್ತು ಯುವಕರು ನಮ್ಮೆಲ್ಲರನ್ನು ಐದು ಘಂಟೆಗಳು ರಂಜಿಸಿ ಮುದತಂದರು. ಹಿಂದಿನ ವರ್ಷಗಳ "Talent Show"ನ ಈ ಬಾರಿ ಹೊಸ ಸಮಿತಿಯವರು "MKANT Got Talent" ಆಗಿ ಪ್ರಸ್ತುತ ಪಡಿಸಿದರು.

ಈ ವೈವಿಧ್ಯಮಯ ಕಾರ್ಯಕ್ರಮದಲ್ಲಿ Nursery rhymes ಇಂದ ಹಿಡಿದು ದೇಶಭಕ್ತಿ ಗೀತೆ, ಚಿತ್ರ ಗೀತೆ, ಸುಗಮ ಸಂಗೀತ ಮತ್ತು ಶಾಸ್ತ್ರೀಯ ಸಂಗೀತದವರೆಗೂ ಎಲ್ಲಾ ಅಭಿವ್ಯಕ್ತಿಗೊಂಡವು . ನಿಮಗೆ ವಾದ್ಯಗಳು ಬೇಕೆ - ಮೃದಂಗ, ಕೊಳಲು, guitar, piano, violinನಲ್ಲಿ ಮಕ್ಕಳು ತೋರಿಸಿದ ಕೈಚಳಕ ಅದ್ಭುತ. ಹಾಡು ಮತ್ತು ವಾದ್ಯಗಳು ಕಿವಿಗೆ ಇಂಪು ಕೊಟ್ಟರೆ, ನೃತ್ಯಗಳು ಕಣ್ಣನ್ನು ತಣಿಸಿದವು. ಭರತನಾಟ್ಯ ಹಾಗೂ ಸಿನಿಮಾ ನೃತ್ಯಗಳು ಪ್ರೇಕ್ಷಕರ ಮನ ಸೂರೆಗೊಂಡವು.




ಈ ಕಾರ್ಯಕ್ರಮದಲ್ಲಿ ಅರಳುತ್ತಿರುವ ಮಲ್ಲಿಗೆ ಮೊಗ್ಗುಗಳು ಹೆಚ್ಚಿದ್ದರೂ, ಅವರ ಜೊತೆ ಪಕ್ವ ಪ್ರತಿಭೆಗಳು ಮೂಡಿಬಂದವು. Prithvi Rao/ Darshan Rao ಅಪ್ಪ-ಮಗನ ಜೋಡಿಯ rock ಪ್ರದರ್ಶನ ಸಭಾಂಗಣವನ್ನು ಅಲುಗಿಸಿತು. ಈ ಅಪರೂಪದ ಪ್ರದರ್ಶನ ಮನದಲ್ಲಿ ನೆಲೆಯೂರಿತು. ಇನ್ನೊಂದು ವಿಶೇಷ ಕಾರ್ಯಕ್ರಮ - ವರ್ಷ ಅಪ್ಪಾಜಿಯ ಶಾಸ್ತ್ರೀಯ ಸಂಗೀತ - ದಾಸರ ಪದದಿಂದ ತಿಲ್ಲಾನದವರೆಗೂ ಇವಳ ಧ್ವನಿಯ ಇಂಪು ಜನರನ್ನು ರಂಜಿಸಿತು.




ನೀವು ಮನೇಲಿ ಯಾವ ಭಾಷೆ ಮಾತಾಡ್ತೀರಾ? ನಾವು ಮನೇಲಿ ಕನ್ನಡ ..... ಆ ... ಆ .. ಜೊತೆಗೆ ಇಂಗ್ಲೀಶ್ ಸೇರಿಸ್ತೀವಿ. ನಿಮ್ಮ ಮನೇಲೂ ಹಾಗೆ ಇದ್ರೆ ನಮ್ಮ ಯುವ ಪೀಳಿಗೆಯ ನಿರೂಪಕರು ಅರ್ಚನಾ ಮೂರ್ತಿ ಮತ್ತು ರಂಜನ್ ಶ್ರೀನಿವಾಸನ್ ನಡೆಸಿಕೊಟ್ಟಿದ್ದು ನಿಮಗೆ ತುಂಬಾ ಇಷ್ಟ ಆಗಿರುತ್ತೆ. ಅವರ ವಿಭಿನ್ನ ಶೈಲಿ ಹಾಗೂ ಹಾಸ್ಯಗಳು ಕಾರ್ಯಕ್ರಮಕ್ಕೆ ಲವಲವಿಕೆ ತಂದವು. MKANT ಸಮಿತಿಯವರು ಯುವ ಪೀಳಿಗೆಗೆ ಇಂಥ ಅವಕಾಶ ಮಾಡಿಕೊಟ್ಟಿದ್ದು ಗಮನಾರ್ಹ.

'America got talent' ಕಾರ್ಯಕ್ರಮದಲ್ಲಿ ಒಬ್ಬರು ವಿಜೇತರಾದರೆ, ನಮ್ಮ 'MKANT got talent'ನಲ್ಲಿ ಎಲ್ಲರೂ ಜಯಶಾಲಿಗಳು. ಈ ಮನ್ಮಥ ನಾಮ ಸಂವತ್ಸರದಲ್ಲಿ ಇನ್ನೂ ಹೆಚ್ಚಿನ, ಇನ್ನೂ ಉತ್ತಮ ಪ್ರತಿಭೆಗಳು ಮೂಡಿ ಬರಲಿ ಎಂದು ಆಶಿಸುತ್ತಾ ಎಲ್ಲರಿಗೂ ಯುಗಾದಿಯ ಶುಭಾಶಯಗಳನ್ನು ಕೋರುತ್ತೇನೆ.

# ಅಧ್ಯಕ್ಷರ ಸಂದೇಶ

- ವಿದ್ಯಾ ದತ್ತ



ಆತ್ಮೀಯ ಕನ್ನಡ ಬಂಧುಗಳೇ,

ಮಲ್ಲಿಗೆ ಕನ್ನಡ ಸಂಘದ ಬಂಧು ಮಿತ್ರರಿಗೆಲ್ಲಾ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು. ಮನ್ಮಥ ನಾಮ ಸಂವತ್ಸರ ನಮ್ಮೆಲ್ಲರಲ್ಲೂ ಪ್ರೀತಿ, ಬಾಂಧವ್ಯವನ್ನು ಹೆಚ್ಚಿಸಿ, ಸುಖ, ಶಾಂತಿ, ನೆಮ್ಮದಿ ತರಲೆಂದು ಹಾರೈಸುತ್ತೇನೆ. ಯುಗಾದಿ ಹಬ್ಬ ಎಂದರೆ ನಮಗೆ ಮೊದಲು ನೆನಪಾಗುವುದು ಬೇವು-ಬೆಲ್ಲ. ಬೇವು - ಬೆಲ್ಲ ನಾವು ನಮ್ಮ ಜೀವನದಲ್ಲಿ ಕಾಣುವ ಸಿಹಿ-ಕಹಿ ಅನುಭವಗಳ ಸಂಕೇತ. ಬೇವು ಬೆಲ್ಲವನ್ನು ಒಟ್ಟಿಗೆ ಸೇವಿಸಿ, ನಾವು ನಮ್ಮ ಜೀವನದಲ್ಲಿ ಎದುರಾಗುವ ಸಿಹಿ ಕಹಿ ಅನುಭವಗಳನ್ನು ಸಮನಾಗಿ ಸ್ವೀಕರಿಸಿ ಮುನ್ನಡೆಯುವ ಸಾಮರ್ಥ್ಯವನ್ನು ಆ ಭಗವಂತನು ನಮಗೆ ಕರುಣಿಸಲೆಂದು ಬೇಡುವ ಸುಸಂದರ್ಭವೇ ಈ ಯುಗಾದಿ ಹಬ್ಬವಾಗಿದೆ.

ಇದೇ ಆಶಯದೊಂದಿಗೆ ೨೦೧೪ರ ಯುಗಾದಿ ಸಮಯದಲ್ಲಿ ಶುರುವಾದ ನಮ್ಮ ಕಾರ್ಯಕಾರಿ ಸಮಿತಿ ಈಗ ಒಂದು ವರ್ಷ ಅವಧಿಯನ್ನು ಪೂರೈಸಿದೆ. ಈ ಒಂದು ವರ್ಷದಲ್ಲಿ ಅದು ನಡೆಸಿದ ಚಟುವಟಿಕೆಗಳು ಇಂತಿವೆ. ಮೊದಲಿಗೆ MKANT SPORTS and PICNIC, ಎರಡನೆಯದಾಗಿ ಯಕ್ಷಗಾನ ಹಾಗು ಮುಖ್ಯಮಂತ್ರಿ ಚಂದ್ರುರವರ ರಸ ಸಂಜೆ, ಮೂರನೆಯದಾಗಿ ಮಲ್ಲಿಗೆ ಕನ್ನಡ ಸಂಘದ ೨೦ನೆ ವಾರ್ಷಿಕೋತ್ಸವ, ರಾಜ್ಯೋತ್ಸವ ಹಾಗು ದೀಪಾವಳಿ ಕಾರ್ಯಕ್ರಮ. ಇದಲ್ಲದೆ, ರಾಜ್ಯೋತ್ಸವ ಕ್ರೀಡಾ ಟೂರ್ನಮೆಂಟ್, MKANT TALENT SHOW ನಡೆಸಿದೆ. ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಪ್ರಾರಂಭಿಸಲಾದ "MKANT TALENT SHOW" ಕಾರ್ಯಕ್ರಮಕ್ಕೆ "MKANT GOT TALENT" ಎಂದು ಮರುನಾಮಕರಣ ಮಾಡಿ, ಈ ಕಾರ್ಯಕ್ರಮವನ್ನು ನವ ಯುವಕ ಯುವತಿಯರೇ ನಡೆಸಿಕೊಂಡು ಹೊಗುವ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಗಿದೆ.

ಪ್ರಸ್ತುತ ವರ್ಷದಲ್ಲಿ, ನಮ್ಮ ಕಾರ್ಯಕಾರಿ ಸಮಿತಿಯು "ಹೊಸಚಿಗುರು ಹಳೆಬೇರು ಕೂಡಿದರೆ ಮರ ಸೊಬಗು , ಹೊಸ ಯುಕ್ತಿ ಹಳೆ ತತ್ವ ಒಡಗೂಡೆ ಧರ್ಮ" ಎಂಬ ಉಕ್ತಿಗೆ ಅನುಗುಣವಾಗಿ ಹಲವಾರು ರೀತಿಯ ಪ್ರಗತಿಪರ ಬದಲಾವಣೆಗಳನ್ನು ತರುವ ಪ್ರಯತ್ನ ನಡೆಸಿದೆ. ಒಂದೊಂದಾಗಿ ಹೇಳಬೇಕೆಂದರೆ, ನಮ್ಮ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ನಮ್ಮ ಪ್ರಮುಖ ಕಾರ್ಯಕ್ರಮಗಳಾದ ಯುಗಾದಿ ಹಾಗು ದೀಪಾವಳಿ ಕಾರ್ಯಕ್ರಮಗಳನ್ನು ದೊಡ್ಡ ಸಭಾಂಗಣದಲ್ಲಿ ನಡೆಸಲಾಗುತ್ತಿದೆ. ಭಾನುವಾರದ ಕಾರ್ಯಕ್ರಮಗಳಾದರೆ, ಊಟದಿಂದ ಪ್ರಾರಂಭ ಮಾಡುವ ಯೋಜನೆ ಸಂಘದ ಸದಸ್ಯರಿಗೆಲ್ಲರಿಗೂ ಅನುಕೂಲಕರವಾಗಿ ಪರಿವರ್ತನೆಗೊಂಡಿದೆ. ಇವುಗಳಲ್ಲದೆ, ಇನ್ನೂ ಕೆಲವು ಪ್ರಗತಿಪರ ಯೋಜನೆಗಳಿಗಾಗಿ ಹಾಗೂ, ಸಂಘದ ಬಜೆಟ್ಗೆ ಅನುಕೂಲವಾಗುವಂತೆ ಮತ್ತು ಸದಸ್ಯರ ಅನುಕೂಲವನ್ನು ಪರಿಗಣಿಸಿ, ಈ ವರ್ಷದಿಂದ ಸಂಘದ ಸದಸ್ಯತ್ವದ ಹೊಸ ನಮೂನೆಗಳನ್ನು ಜಾರಿಗೆ ತರಲಾಗಿದೆ. ಮತ್ತೊಂದು ಮುಖ್ಯವಾದ ಬದಲಾವಣೆ ಅಂದರೆ, ಮಲ್ಲಿಗೆ ಕನ್ನಡ ಸಂಘದ social media ಉಪಸ್ಥಿತಿಯನ್ನು ವಿಸ್ತಾರಗೊಳಿಸುವ ನಿಟ್ಟಿನಲ್ಲಿ ನಮ್ಮ ಸಂಘದ Facebook Page ಹಾಗು ನಮ್ಮ ಸಂಘದ ಕಾರ್ಯಚಟುವಟಿಕೆಗಳಿಗೆ, ಹಾಗು ಸದಸ್ಯರಿಗೆ ಅನುಕೂಲ ವಾಗುವಂತಹ mobile ready ಅಂತರ್ಜಾಲ ತಾಣ (Website) ಬಿಡುಗಡೆ ಮಾಡಲಾಯಿತು.

ನಮ್ಮ ಸಂಘವು ವಿಶಾಲವಾಗಿ ಬೆಳೆಯುತ್ತಿರುವುದು ಒಂದು ಸಂತಸದ ವಿಷಯ. ಆದಕ್ಕೆ ಪೂರಕವಾಗಿ, ನಮ್ಮ ಸಂಘದ ಸ್ವಯಂಸೇವಕರ ಅವಶ್ಯಕತೆಯೂ ಹೆಚ್ಚಾಗಿದೆ. ನಮ್ಮ ಮಲ್ಲಿಗೆ ಕನ್ನಡ ಸಂಘವು ನಮ್ಮಲ್ಲಿರುವ ಹಲವಾರು ಪ್ರತಿಭೆಗಳಿಗೆ ಒಂದು ಮಾದರಿಯ ವೇದಿಕೆಯಾಗಿದೆ. "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೊ" ಎಂಬ ಪುರಂದರ ದಾಸರ ನುಡಿಯಂತೆ, ನಮಗೆ ಹಲವಾರು ಅವಕಾಶಗಳನ್ನು ಮಾಡಿಕೊಟ್ಟಿರೊ ನಮ್ಮ ಈ ಮಲ್ಲಿಗೆ ಕನ್ನಡ ಸಂಘಕ್ಕೆ ಸ್ವಯಂಸೇವೆ ಸಲ್ಲಿಸುವ ಮೂಲಕ ಗೌರವ ಸಲ್ಲಿಸೋಣ.ಈ ನಿಟ್ಟಿನಲ್ಲಿ, ನಾನು ನಮ್ಮ ಸಂಘದ ಹಿರಿಯ ಸದಸ್ಯರು ಹಾಗು ಕಿರಿಯ ಸದಸ್ಯರಲ್ಲಿ, ವಿನಂತಿಸುವುದೇನೆಂದರೆ, ಸಂಘದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವುದರಲ್ಲಿ ನಿಮ್ಮ ಪಾತ್ರವೂ ಮಹತ್ತರವಾಗಿರುತ್ತದೆ. ಪ್ರತಿಯೊಬ್ಬ ಸದಸ್ಯರೂ ಸಂಘದ ಸೇವೆ, ತಮ್ಮ ಮತ್ತೊಂದು ಕರ್ತವ್ಯವಾಗಿದೆ ಎಂಬ ಅರಿವಿನಿಂದ ಸ್ವಯಂಪ್ರೇರಿತರಾಗಿ ಸ್ವಯಂಸೇವೆಗೆ ಸಿದ್ಧರಾಗಬೇಕು.

ಬನ್ನಿ, ನಾವೆಲ್ಲರೂ ಸೇರಿ, ಒಂದುಗೂಡಿ, ಕೈ ಜೋಡಿಸಿ, ಮುಂಬರುವ ನಮ್ಮೆಲ್ಲಾ ಕಾರ್ಯಕ್ರಮಗಳನ್ನು ಸಕ್ರಿಯವಾಗಿ ನಡೆಸಿಕೊಂಡು ಹೋಗೋಣ.

ಇಂತಿ ವಂದನೆಗಳೊಂದಿಗೆ,
ಶ್ರೀಮತಿ ವಿದ್ಯಾ ದತ್ತ




ಮುಖಪುಟ

## ಸಂಪಾದಕೀಯ

- ಪೂರ್ಣಿಮ ಸುಬ್ರಹ್ಮಣ್ಯ



ನಮಸ್ಕಾರ,
ಆತ್ಮೀಯ ಓದುಗರಿಗೆ "ಮನ್ಮಥ" ನಾಮ ಸಂವತ್ಸರ ಯುಗಾದಿಯ ಶುಭಾಶಯಗಳು.

ಮತ್ತೊಂದು ಯುಗಾದಿ ಸದ್ದಿಲ್ಲದೆ ಸರಿದು ಬಂದಿದೆ. ಶಿಶಿರ ಮೌನದ ಶೀತಲ ಧ್ಯಾನದಲ್ಲಿ ಮುಳುಗಿದಂತೆ ತೋರಿದ ಗಿಡಮರಗಳು ಹೊಸ ಚಿಗುರಿನೊಂದಿಗೆ ಕಂಗೊಳಿಸುತ್ತಾ, ಹೊಸ ಬೆರಗು ತಂದಿವೆ. ವರ್ಷ ವರ್ಷವೂ ಇದೇ ನಡೆಯಾದರೂ ಪ್ರತಿ ವಸಂತವೂ ನೂತನವೆಂಬಂತೆ ನವ ಉತ್ಸಾಹ, ಉಲ್ಲಾಸ, ಪ್ರಕೃತಿಯ ಸೊಬಗು ಮನಸನ್ನು ಮುದಗೊಳಿಸುತ್ತವೆ. ಸಂದ ನೆನಪನು ಸವಿವ ಮನಸಿಗೆ, ಕನಸ ಕರೆವ ಕಂಗಳಿಗೆ ಮುದ ನೀಡಲು, ಸಂಭ್ರಮ ತರಲು ಮತ್ತೆ ಬಂದಿದೆ ಯುಗಾದಿ.

ಭಾರತ ದೇಶದಲ್ಲಿ ಯುಗಾದಿ ಆಚರಣೆ ಒಂದು ರೀತಿಯಾದರೆ ಇಲ್ಲಿಯ ಅನಿವಾಸಿ ಭಾರತೀಯರ ಆಚರಣೆ ಮತ್ತೊಂದು ಬಗೆ. ಮೊದಲಿಗೆ ಈ ಬಾರಿ ವಾರಾಂತ್ಯದಲ್ಲಿ ಬಂದ ಹಬ್ಬ ಆ ಕಾರಣಕ್ಕಾಗಿಯೇ ಹೆಚ್ಚು ಸವಿ ತಂದಿತು. ಮಾವು ಬೇವಿನ ಚಿಗುರು ನೋಡಲು ಸಾಧ್ಯವಿಲ್ಲವಾದರೂ ಭಾರತೀಯ ಅಂಗಡಿಗಳಲ್ಲಿ ಕೊಳ್ಳಲು ಸಾಧ್ಯವಿತ್ತು, ಸಾಲು ಮಾತ್ರ ಸೀಮೆಎಣ್ಣೆ ಕ್ಯೂ ನೆನಪಿಸಿದ್ದು ಸತ್ಯ!


ಇನ್ನು ಮಕ್ಕಳಂತೂ, ಹೊಸ ಬಟ್ಟೆ ಧರಿಸಿ ಅಕ್ಷರಶಃ ಓಡಾಡಿದ್ದೇ ಓಡಾಡಿದ್ದು. ಬರೀ ಯುಗಾದಿ ಸಂತೋಷಕೂಟ ಅಂದುಕೋಬೇಡಿ! ಸಂಗೀತ ಸಭೆ, ನೃತ್ಯ ಕಾರ್ಯಕ್ರಮ, band, concert, game, practice, class, competition etc etc .... ಇವುಗಳಲ್ಲಿ ಮುಳುಗಿಹೋಗಿ ,ಪಾಪ ಒಬ್ಬಟ್ಟು ಬಿಡಿ, ಬೇವು-ಬೆಲ್ಲ ತಿನ್ನಲೂ ಪುರುಸೊತ್ತು ಇಲ್ಲದಂತೆ ಆದ ಕಥೆಗಳೂ ಉಂಟು. ಈ ಕಥೆಗೆ ಹಲವರು ಹೂಂಗುಟ್ಟಿದ್ದೂ ಇದೆ, ಇದನ್ನು ಓದುತ್ತಿದ್ದಂತೆ ನೀವು ಹೂಂಗುಡುವುದೂ ಕೇಳಿಸುತ್ತಿದೆ!

ಇಷ್ಟೆಲ್ಲಾ ವ್ಯಸ್ತರಾಗಿದ್ದೂ ಅನೇಕರು ಮರೆಯದೆ, ನಮ್ಮ ಕಂಪು ಪತ್ರಿಕೆಗೆ ಕಾಣಿಕೆಗಳನ್ನು ಕಳಿಸಿದ್ದಾರೆ. ನೀವುಗಳು ಸಾವಧಾನದಿಂದ ಪತ್ರಿಕೆಯನ್ನು ಓದಿ ಆನಂದಿಸಿದರೆ ಅವರೆಲ್ಲರ ಶ್ರಮ ಸಾರ್ಥಕ ಎಂದು ಭಾವಿಸುತ್ತಾ,

ಮತ್ತೊಮ್ಮೆ ಯುಗಾದಿ ಶುಭಾಶಯಗಳೊಂದಿಗೆ
ಪೂರ್ಣಿಮಾ ಸುಬ್ರಹ್ಮಣ್ಯ

## ಸಂಕ್ರಾಂತಿ

- ಹ .ನ ವೇಣು ಗೋಪಾಲ್



ನಂಬಿಹರು ಜಗವೆಲ್ಲ ಭ್ರಾಂತಿ
ಕನಸಾಗಿರುವುದು ಜಗದ ಶಾಂತಿ
ಎಲ್ಲೆಲ್ಲೂ some ಕ್ರಾಂತಿ
ಆದ್ರೆ ಕರ್ನಾಟಕದಲ್ಲಿ ಸಂಭ್ರಮದ ಸಂಕ್ರಾಂತಿ

ಎಲ್ಲೆಡೆ ಅಪನಂಬಿಕೆ ಎನ್ನುವ ಮುಳ್ಳು
ತುಳುಕಾಡುತಿದೆ ಎಲ್ಲೆಲ್ಲೂ ಸುಳ್ಳು
ಹಂಚುತಿಹರು ಇಲ್ಲಿ ಸಂತಸದಿ ಎಳ್ಳು

ಕಾದಾಡುತಿಹರು ತಾವೇ ಹೆಚ್ಚೆಂದು ಎಲ್ಲ
ಕಾಡುಕಿಚ್ಚು ಹಚ್ಚಿಹರು ಜಗಕೆಲ್ಲ
ಆದ್ರೆ ಸೌಮ್ಯದ ಕನ್ನಡಿಗರು ಹಂಚಿದರು ಬೆಲ್ಲ

ಜನವರಿಯ ಮುಂಜಾನೆಯ ಮಬ್ಬು
ಓಡುವುರು , ನೆನೆಯುವರು ಹತ್ತಿರದ pubಉ
ಎಳ್ಳು ಬೀರುವವರ ನೆರೆಗೆ ಕಂಡು ಹಾರಿತು ಹುಬ್ಬು
ಸಂತಸದಿ ನಾರಿಯರು ಬೀರುತಿಹರು ಸಿಹಿ ಕಬ್ಬು

ಈ ನಡುವೆ ಹೊರಗೆ ಬಂದಿದೆ , ಬರಬಾರದ , ಮಚ್ಚು
ನಾ ಬಲ್ಲೆ ಎಲ್ಲಿಂದ ಬಂತು ಈ ಪ್ರಳಯಾಂತಕ ಕೆಚ್ಚು
ಇವರಿಗೆ , ಕರೆಯಬೇಕಲ್ಲವೆ ಇದನ್ನು ಅತಿ ಹುಚ್ಚು
ಎಲ್ಲ ಬದಿಗಿಟ್ಟು ನಮ್ಮ ರಮಣಿಯರು ಹಂಚುತಿಹರು ಸಕ್ಕರೆಯ ಅಚ್ಚು

ಯಾದವೀ ಕಲಹಕ್ಕೆ , ಮಚ್ಚು ಹೊರಬರಲಿಕ್ಕೆ , ಕಾರಣ ,ಮಣ್ಣು
ಅತಿಯಾಯ್ತು , ಘೋರವಾಗಿದೆ, ಈ ದುರಾಸೆಯೆ ಹುಣ್ಣು
ಕುರುಡಾಗಿವೆ ಮನುಜನ ಇಂದ್ರಿಯದ ಹಾಗೂ ಮನಸಿನ ಕಣ್ಣು
ನಮ್ಮ ತರುಣಿಯರು , ಇದೆಲ್ಲ ಬದಿಗಿಟ್ಟು , ಬೀರುತಿಹರು ಬಾಳೆಹಣ್ಣು

ಸಂಕ್ರಾಂತಿ ಬಂದಿಹದು ,
ಸಂಭ್ರಮವ ತಂದಿಹದು ,
ಶುಭ ದಿನಗಳ ಜೊತೆಗೆ !!

# ವಿಚಿತ್ರ ಹರಾಜು



- ವನಜ ರಾಜನ್

**ಶ್! ಕೇಳಿ, ಓದಿ, ವಿಸ್ಮಯಾನ್ವಿತ ವಿಚಿತ್ರ ಹರಾಜಿನ ಬಗ್ಗೆ...**

ಎಲ್ಲಿ ನಡೆಯಿತು? ಹೇಗೆ ನಡೆಯಿತು? ಏನೇನು ಹರಾಜಾಯಿತು? ಪ್ರಶ್ನೆಗಳ ಸರಮಾಲೆ ಹುಟ್ಟಿಕೊಂಡಿರಬೇಕು ಓದುಗರ ಮನಸ್ಸಿನಲ್ಲಿ ಅಲ್ಲವೇ? ಒಂದಾನೊಂದು ಕಾಲದಲ್ಲಿ, ಹರಾಜು ಎಂದೊಡನೆ, ಅಂದಿನ ಕಪ್ಪು-ಬಿಳುಪು ಚಲನಚಿತ್ರದ ದೃಶ್ಯಾವಳಿಗಳು, ಮನಸ್ಸಿನ ಪರದೆಯ ಮೇಲೆ ಮೂಡಿಬರುತ್ತವೆ. ಒಂದು ಕಾಲದಲ್ಲಿ ಚೆನ್ನಾಗಿ ಬಾಳಿ ಬದುಕಿದ ಕುಟುಂಬದ ಕಣ್ಣೀರಿನ ಕಥೆಗೆ, ಅವರ ದುಃಸ್ಥಿತಿಗೆ ಮರುಗಿ, ಇನ್ನಿತರ ಪ್ರೇಕ್ಷಕರೊಡನೆ ಕಣ್ಣೀರಿನ ಕೋಡಿ ಹರಿಸಿದ ನೆನಪುಗಳು ಇನ್ನೂ ಮಾಸಿಲ್ಲ.

ಒಂದೆಡೆ ಈ ಕುಟುಂಬ ಬಾಳಿ ಬದುಕಿದ ಅವರ ವಾಸಸ್ಥಾನದಿಂದ ಹೊರದೂಡಲ್ಪಟ್ಟು, ಬಿಸಿಲು ಗಾಳಿಯಲ್ಲಿ ಕುಳಿತು ಕೊರಗುತ್ತಿದ್ದರೆ, 'ಮನೆ' ಖರೀದಿಸಿದವರು, ಅವರ ಮನೆಯ ಪಾತ್ರೆ-ಪಡಗಗಳನ್ನು ಇನ್ನಿತರ ವಸ್ತುಗಳನ್ನು ಒಂದೊಂದನ್ನೇ ಬೀಸಿ ಬಿಸಾಡುವ ದೃಶ್ಯ! ಬಿಡಿ! ಅಂದಿನ ಚಲನಚಿತ್ರದ ಕಥಾವಸ್ತುವಿಗೆ ಇವೆಲ್ಲಾ ಸಹಜವೆನಿಸುತ್ತಿತ್ತು! "ಮಾನ-ಮರ್ಯಾದೆ ಎಲ್ಲಾ ಹರಾಜಾಯಿತು" ಎಂಬ ಉದ್ಗಾರ ಜನರ ಬಾಯಿಂದ ಹೊರಡುವುದು ಸಹ ಸರ್ವೇಸಾಮಾನ್ಯವಾಗಿತ್ತು, ಅಂದಿನ ದಿನಗಳಲ್ಲಿ! ಇಂದಿನ ದಿನಗಳಲ್ಲಿ 'ಮಾನ-ಮರ್ಯಾದೆ' ಅನ್ನೋ ಮಾತಿಗೆ, ನಿಷ್ಕೃಷ್ಟಾರ್ಥ ಅಥವಾ ಪರಿಭಾಷೆ(Definition) ಏನು ಕೊಡಲು ಸಾಧ್ಯ?

ಅದಿರಲಿ, ಸಾಧಕರು, ಹಿರಿಯರು, ವಿಜ್ಞಾನಿಗಳು ಇವರುಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ನುಡಿವಾಗ, " They have left their foot prints on the sands of time" ಎಂದು ಉದ್ಗರಿಸುವುದುಂಟು. ಅದಕ್ಕೆ ಇರಬೇಕು, ಈ ಮೇಲ್ಕಂಡ ಸಾಧಕರ ಕೊಡುಗೆ ಜನಹಿತಕ್ಕಾಗಿ ಆಗಿರುವುದರಿಂದ "ಕಾಲಾತೀತ"ವಾದುದು! ಮರಳಿನಲ್ಲಿ ಮೂಡಿಬಂದರೆ, ಅಳಿಸಿ-ಅಳಿದುಹೋದರೆ ಮುಂದಿನ ಪೀಳಿಗೆಗೆ ಅವರ ನೆನಪುಗಳು ಮೂಡಿಸುವುದು ಹೇಗೆ, ಎಂದು ಆಲೋಚಿಸಿ, ಈ ಕೆಳಕಂಡ ಪಟ್ಟಿಯಲ್ಲಿ ಕಾಣಿಸಲಾಗಿರುವ ವಸ್ತುಗಳನ್ನು ಹರಾಜಿನಲ್ಲಿ ಕೊಂಡುಕೊಂಡರೋ ಏನೋ ಗೊತ್ತಿಲ್ಲ. ಆದರೆ ಅವುಗಳನ್ನು ಕೊಳ್ಳಲು"ಕೈ"ಯಲ್ಲಿ ಸಾಕಷ್ಟಿರಲೇಬೇಕು.


- ಅಬ್ರಹಾಂ ಲಿಂಕನ್‌ರವರ ಕೂದಲೆಳೆಗೆ $25,000
- ಒಂದು ಜಾಹೀರಾತಿನಲ್ಲಿ ಆಸ್ ಬೋರ್ನ್ ಸಂಗಡ ಕಾಣಿಸಿಕೊಂಡಿದ್ದ ಜಸ್ಟಿನ್ ಬೈಬರ್ ಧರಿಸಿದ ಸ್ಪೇಸ್ ಸೂಟ್ $5800
- ಜೆ.ಎಫ್.ಕೆನಡಿಯನ್ನು ಕೊಂದ ಲೀ ಹಾರ್ವೆ ಆಸ್‌ವಾಲ್ಡ್‌ನ ಮದುವೆಯ ಉಂಗುರ $118,000
- ಬ್ಯಾಂಡ್ ಮುಖಂಡ ವೇಲಸ್ ಹಾರ್ಟ್‌ಲೇ, ಟೈಟಾನಿಕ್ ಹಡಗು ಮುಳುಗುತ್ತಿದ್ದ ಸಮಯದಲ್ಲಿ ಕಷ್ಟದಲ್ಲಿ ಸಿಕ್ಕಿಕೊಂಡ ಪ್ರಯಾಣಿಕರನ್ನು ಸಮಾಧಾನ ಪಡಿಸಲು ಪಿಟೀಲು ನುಡಿಸಿದನಂತೆ! ನುಡಿಸುತ್ತಲೇ, ತನ್ನ ಪ್ರಾಣ ಕಳೆದುಕೊಂಡನಂತೆ! ಅದು ಹರಾಜಿನಲ್ಲಿ $900,000ಕ್ಕೆ ಮಾರಾಟವಾಯ್ತು.
- ಬೈಬಲ್ ಹಿಡಿದ ಹೆಣ್ಣಿನ ಸಂಗಡ ಗಿಡ್ಡಂಗಿ(Tuxedo ತೊಟ್ಟ ಒಂದು ಅಸ್ಥಿಪಂಜರದ ಬೆಲೆ $950

ಇವಿಷ್ಟು ಓಕೆ ಎಂದರೂ, ಈ ಕೆಳಗಿನ ಪಟ್ಟಿಯಲ್ಲಿರುವುದು ಬೇಕೇ??

- ಕ್ಲಿಂಟನ್ ಗೆಳತಿ ಮೋನಿಕಾ ಲೆವೆನ್ಸ್ಕಿ ಧರಿಸಿದ ಒಳಉಡುಪು
- ಗಾಯಕ ಎಲ್ವಿಸ್ ಪ್ರೆಸ್ಲೀಯ ಮಲಿನಗೊಂಡ ಒಳಉಡುಪು
- 1947ರಲ್ಲಿ ನಡೆದ ಪ್ರಿನ್ಸ್ ಫಿಲಿಪ್ ಮತ್ತು ಎಲಿಜಬೆತ್‌ರ ಮದುವೆಯ ಸಮಯದಲ್ಲಿ ತಯಾರಾದ ಕೇಕ್‌ನ ಒಂದು ತುಂಡು - 560 ಪೌಂಡ್‌ಗಳಿಗೆ ಮಾರಾಟವಾಯಿತು.
- ಬ್ರಾಡ್ ಪಿಟ್ ಮತ್ತು, ಏಂಜಲೀನ ಉಸಿರು(ಬಾಟಲಿನಲ್ಲಿದ್ದು) 340 ಪೌಂಡುಗಳಿಗೆ ಮಾರಾಟವಾಯ್ತು
- ಬ್ರಿಟನ್‌ನ ಉಕ್ಕಿನ ಹೆಂಗಸು ಎನಿಸಿಕೊಂಡಿರುವ ಮಾರ್ಗರೆಟ್ ಥ್ಯಾಚರ್‍ರ "ಲಿಪ್‌ಸ್ಟಿಕ್ ಮುತ್ತು" ಗುರುತಿನ ಒಂದು ಕೈಚೌಕ $3000ಕ್ಕೆ ಮಾರಾಟವಾಯ್ತು.

(ನಾತ ನಾರುತ್ತಿರುವ, ಹಳಸಿ ಹಳೆಯದಾದುವುಗಳಿಗೆ ಹಣ ಕೊಟ್ಟು ಕೊಳ್ಳಬೇಕೇ??)

# ಹನಿಗವನಗಳು



- ಜ್ಯೋತಿ

**ಯಾರಿಗೆ ಹೇಳಲಿ ನನ್ನ ಮನದ ದುಗುಡವ,**
**ತತ್ತರಿಸುತ್ತಿರುವೆ ಭಯದಿಂದ ನಡುಗಿ,**
**ಆಗಲೇ ಆಕಾಶದಲಿ ಮಿಂಚು ಗುಡುಗಿ,**
**ತಲೆ ತಟ್ಟಿ ಹೇಳಿತು ಬೆಳಗಾಯಿತೇ ಹುಡುಗಿ!**

**ನಿನ್ನ ಕಂಡ ಆ ಮೊದಲ ಕ್ಷಣ,**
**ನಿನ್ನ ಕಂಡ ಆ ಕೊನೆಯ ಕ್ಷಣ,**
**ಇವೆರಡರ ಮಧ್ಯದ ಆ ಸುಂದರ ಕ್ಷಣ,**
**ಕ್ಷೀಣಿಸುತ್ತಾ ಹೋಗುತ್ತಿದೆ ದಿನಾದಿನಾ...**

**ಕೆಂಪು ಕೆಂಪಗಿನ ಕೆಂಡ ಸಂಪಿಗೆ,**
**ಹಾಲು ಬಿಳುಪಿನ ಬಿಳಿ ಮಲ್ಲಿಗೆ,**
**ಬಣ್ಣ ಯಾವುದಾದರೇನಂತೆ ಕೊನೆಗೆ,**
**ಎಲ್ಲವೂ ಸಲ್ಲುವುದು ದೇವರ ಪೂಜೆಗೆ...**

**ಈ ಸುರ ಸುಂದರ ಮನ್ವಂತರ,**
**ನನ್ನ ಜೀವನದ ಮಧ್ಯಂತರ,**
**ಮನದಲಿ ಹೆಣೆದ ಕನಸುಗಳೇ ಸುಂದರ,**
**ನನಸಾದ ಕನಸುಗಳು ಹೇಳುತ್ತಿವೆ ನಿನ್ನ ಹೆಸರ**

# ಕವಿನಮನ

- ಪೂರ್ಣಿಮ ಸುಬ್ರಹ್ಮಣ್ಯ



ಮೈಸೂರ ಮಲ್ಲಿಗೆಯ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರು, ಇಂದು ಭೌತಿಕವಾಗಿ ನಮ್ಮೊಂದಿಗೆ ಇದ್ದಿದ್ದರೆ ಶತಾಯುಷಿ ಆಗಿರುತ್ತಿದ್ದರು. ಈ ಸಂದರ್ಭದಲ್ಲಿ ನಮ್ಮ ಭಾವಲೋಕವನ್ನು ಸಮೃದ್ಧಿಗೊಳಿಸಿದ ಒಲುಮೆಯ ಚೇತನಕ್ಕೊಂದು ಆದರದ ಕವಿನಮನ.

ಇಲ್ಲಿ ಬಳಕೆಯಾದ ಹಲವು ಪದಗಳು, ಪ್ರತಿಮೆಗಳು ಮತ್ತು ನುಡಿಗಟ್ಟುಗಳು, ಅವರದೇ ಕವನ ಸಂಕಲನಗಳ ಹೆಸರು ಮತ್ತು ಕವಿತೆಯಿಂದ ಕಡ ತಂದ ಸಾಲುಗಳು.



**ಡಾ|| ಕೆ.ಎಸ್. ನರಸಿಂಹಸ್ವಾಮಿ**
(26 ಜನವರಿ 1915 – 27ಡಿಸೆಂಬರ್ 2003)

ಅಂದು,
ನೀವು ನೆಟ್ಟ ಮಲ್ಲಿಗೆ ಹಂಬು
ಈ 'ನವಪಲ್ಲವ'ದ ವೇಳೆ
'ದುಂಡುಮಲ್ಲಿಗೆ'ಯ ಮಾಲೆ.

'ಕೈಮರದ ನೆಳಲಲ್ಲಿ'
'ಸಂಜೆ ಹಾಡಿಗೆ' 'ನವಿಲ ದನಿ' ಸೇರಿ
'ಶಿಲಾಲತೆ'ಯಲೂ ಕುಸುರಿ.
'ಉಂಗುರ'ದ ಮಿಂಚಂತೆ 'ಎದೆ ತುಂಬ ನಕ್ಷತ್ರ'
ವಸಂತದಲೂ ಮನಸು ಕಾರ್ತಿಕದಾಕಾಶ.

'ಮೌನದಲಿ ಮಾತ ಹುಡುಕುತ್ತಾ'
ಹೊರಟಿರಿ ನೀವು, ಮೆಲ್ದನಿಯ 'ಐರಾವತ'
ಒಲವಿನೊಸಗೆಯ ಮಾತು 'ಹಾಡು-ಹಸೆ'ಯಲ್ಲಿ
ಜೊತೆಗೇ ನಿಂತಿದ್ದಳು 'ದೀಪದ ಮಲ್ಲಿ'.
'ಮನೆಯಿಂದ ಮನೆಗೆ' ಹರಡಿ
'ಇರುವಂತಿಗೆ'ಯ ಕಂಪು,
'ದೀಪಸಾಲಿನ ನಡುವೆ'
"ಹೊಳೆದದ್ದು ತಾರೆ; ಉಳಿದದ್ದು ಆಕಾಶ"!

ಅವರೆಂದಂತೆ,
"ನವದಂಪತಿಗಳ ಪಿಸುಮಾತು" ನಿಮ್ಮ ಕವಿತೆ
ನೋವ ಮರೆಸಿ ನಲಿವ ಮೆರೆಸುವ
ಭಾವಲೋಕದ ಬೆಳಕು, ಹಚ್ಚಿಟ್ಟ ಹಣತೆ.

ಸಂತಸದ ದಾರಿಯಲಿ ಸಾಗಿರಲು ಪಯಣ
ಅಂದು ನೀವಂದ ನೆನಪು,
"ಮೂಲವರು ಬದುಕು; ಉತ್ಸವಮೂರ್ತಿ ಕವಿತೆ"!
ಸೊಗವಿರದ ಸಮಯದಲಿ ಸಾಗಿರಲು ಏಕಾಂಗಿ
ಮನವ ತುಂಬುವುದುಂಟು ನೀವಂದ ಮಾತು,
"ಕಂಬನಿ ಬದುಕು; ಕವಿತೆ ಕರವಸ್ತ್ರ".

ಈ ಯುಗಾದಿಯಲಿ,
ಬೇವು ಬೆಲ್ಲದ ವೇಳೆ
ನಿಮ್ಮದೇ ಕವಿತೆಗಳ ಗುಂಗು.
ನೋವು ನಲಿವಿನ ನಿದರ್ಶನ,
ಸುಖ ದುಃಖ ಸಮತೂಕ ಈ ಜೀವನ.
ಸದ್ದಿರದೆ ಸರಳತೆಗೆ ಸೊಬಗು ಸಂಭ್ರಮ ತಂದ
ಸಂತೃಪ್ತ ಸಜ್ಜನರು ನೀವಲ್ಲವೇ!!






Arpitha Kadaba











Deepika Kumar




Skanda Sunil

ಮುಖಪುಟ

ಅರ್ಚಿತ್ 3ರ್
2 ವರ್ಷ

## ಶ್ರೀರಾಮನವಮಿ



ಭಾರತದಲ್ಲಿ ಎಲ್ಲಾ ಜನರ ಒಂದು ಸಂತಸದ ಹಬ್ಬ ಶ್ರೀರಾಮನವಮಿ. ಶ್ರೀರಾಮ ಹುಟ್ಟಿದ ಈ ದಿನವನ್ನು ಕರ್ನಾಟಕದಲ್ಲೂ ವೈಭವದಿಂದ ಆಚರಿಸುತ್ತಾರೆ. ಇತ್ತೀಚೆಗೆ ಇದನ್ನು ಸಾರ್ವಜನಿಕವಾಗಿ ನಡೆಸುವುದು ಹೆಚ್ಚುತ್ತಿದೆ. ದೇವಸ್ಥಾನಗಳಲ್ಲಿ ಬೇಲದ ಹಣ್ಣಿನ ಪಾನಕ, ಕೋಸಂಬರಿ ಹಾಗು ಮಜ್ಜಿಗೆ ನೀಡುತ್ತಾರೆ. ಅಮೇರಿಕಾ ದೇಶದಲ್ಲಿ ಭಾರತೀಯರು ಅವರ ಮನೆಗಳ ಸಂಕುಲಗಳಲ್ಲಿ ಹಾಗು ದೇವಸ್ಥಾನಗಳಲ್ಲಿ ಒಟ್ಟಿಗೆ ಸೇರಿ ಆಚರಿಸುತ್ತಾರೆ.

ಈ ದಿನ ನಾವು ಶ್ರೀರಾಮನ ಉತ್ತಮ ಗುಣಗಳನ್ನು ನೆನಪಿಸಿಕೊಂಡು ಅದರಂತೆ ನಡೆಯಲು ಶ್ರಮಿಸೋಣ!

॥ಶ್ರೀರಾಮ್ ಜಯ ರಾಮ್, ಜಯ ಜಯ ರಾಮ್॥



CRAYON ಸೈನಿಕರು

ಬಣ್ಣ-ಬಣ್ಣದ ಸೈನಿಕರು
ಸಿಟ್ಟು ಮುಖದ ಸೈನಿಕರು
ಚಕ್ರವ್ಯೂಹದಲ್ಲಿ ನಿಂತಿರುವ ಸೈನಿಕರು
ಮಾಡಿದರು ವೈರಿ ಜೊತೆ ಯುದ್ಧ
ಅದರಲ್ಲಿ ಶಕ್ತಿಶಾಲಿ ರಾಜ ಗೆದ್ದ

ಅಮೋಘ್




## ನನ್ನ ಮುತ್ತು!

ಪ್ರತಿ ದಿನ ಒಂದು ಆಶ್ಚರ್ಯದ ಸಂಗತಿ ನಡೆಯುತ್ತದೆ. ಪ್ರತಿ ದಿನವು ಒಂದು ರೀತಿಯಲ್ಲಿ ಖುಷಿ ಕೊಡುತ್ತದೆ, ಆದರೆ ಈ ವರುಷ ವಿಶೇಷ. ಈ ವರುಷ, ನಾನು ತುಂಬಾ ಆಸೆ ಪಟ್ಟ ಕನಸು ನಿಜವಾಯಿತು; ನನಗೆ ಒಂದು ಗಿನಿ ಪಿಗ್ ಸಿಕ್ಕಿತು! ನಾನು ಅದಕ್ಕೆ ಚಿನ್ನು ಅಂತ ಹೆಸರಿಟ್ಟೆ. ಈ ಮುದ್ದಾದ ಪ್ರಾಣಿ ತುಂಬಾ ಆಟ ಆಡುತ್ತದೆ. ಮತ್ತೆ, ಚಿನ್ನುಗೆ ನಾನಂದರೆ ಬಹಳ ಪ್ರೀತಿ. ನಾನು ಹೇಳಿದ ಮಾತುಗಳನ್ನು ಕೇಳುತ್ತಾನೆ. ಅದಷ್ಟೆ ಅಲ್ಲ, ನಾನು ಚಿನ್ನುಗೆ ಟ್ರಿಕ್ಸ್ ಕೂಡ ಕಲಿಸಿದ್ದೀನಿ. ಅವನಿಗೆ, ಎರಡು ಕಾಲನ ಎತ್ತಕ್ಕೆ, ನನ್ನನ್ನ ಹಿಂಬಾಲಿಸಕ್ಕೆ, ಮೆಟ್ಟಿಲು ಹತ್ತಕ್ಕೆ, ಮತ್ತೆ ಬೇರೆ ಬೇರೆ ಟ್ರಿಕ್ಸ್‌ಗಳನ್ನು ಮಾಡಕ್ಕೆ ಬರುತ್ತದೆ. ಹಾಗು, ಚಿನ್ನು ಎಲ್ಲರಿಗಿಂತ ನನ್ನನ್ನೇ ಜಾಸ್ತಿ ಇಷ್ಟ ಪಡುತ್ತಾನೆ, ಏಕೆಂದರೆ ನಾನೊಬ್ಬಳೆ ಚಿನ್ನುನ ಸಮಾಧಾನ ಮಾಡಬಲ್ಲೆ; ನನ್ನ ಸೋದರನಿಗೂ ಆಗಲ್ಲ!

ಹೀಗೆ, ಚಿನ್ನು ಒಂದು ಆಶ್ಚರ್ಯದ ವಿಷಯ ನನಗೆ ತುಂಬಾ ಇಷ್ಟ ಆಯಿತು. ಅವನು, ನನ್ನ ಜೀವನದಲ್ಲಿ ಒಂದು ವಿಶೇಷದ ಮುತ್ತು!

ಅವನಿ ಕಶ್ಯಪ್




All About Me !!!

My Full Name: Chinnu Arnavani Kashyap

My Birthday: August 23rd, 2014

My Homecoming Day!!!: November 23rd, 2014

My Favorite Food: Cilantro

My Favorite Treat: I love all treats!!!

My Favorite Accessory: My Beloved Hideout!!!

My Hobbies: Playing with my friends, running around the house, eating vegetables, hay and TREATS, and producing Magic Beans ;-) !!!

My Favorite Person: Avani

ಮಾರ್ಚ್ ೧,೨೦೧೪

ಪ್ರೀತಿಯ ಅಜ್ಜ, ಅಜ್ಜಿಗೆ, ನನ್ನ ನಮಸ್ಕಾರಗಳು. ನೀವು ಎಲ್ಲರು ಹೇಗೆ ಇದ್ದೀರಿ. ನಾವು ಎಲ್ಲರು ಚೆನ್ನಾಗಿ ಇದ್ದೇವೆ.

ಯುಗಾದಿ ಹಬ್ಬ, ಮುಂದಿನ ತಿಂಗಳು. ನಮ್ಮ ಹಿಂದು ಸಂಸ್ಕೃತಿಯ ಪ್ರಕಾರ ಹೊಸ ವರಷದ ಪ್ರಾರಂಬ. ಅಜ್ಜಿ ನಿನ್ನ ಹಾಗೆ ಪೂಜೆ ಇಲ್ಲಿ ಮಾಡುವುದಿಲ್ಲ. ಆದರು ಅಮ್ಮ ಅಪ್ಪ ಮತ್ತು ನಾವು ಆ ದಿನ ಸ್ನಾನ ಪೂಜೆ ಮಾಡ್ತಿ, ಹೊಸ ವರುಷದ ಪಂಚಾಂಗ ಶ್ರವಣ ಮಾಡುವೆವು. ಅಮ್ಮ ಹೊಬಟ್ಟು ಮಾಡುತಾಳೆ. ನೀವು ಸಹ ನಮ್ಮ ಜೊತೆ ಇಲ್ಲಿ ಇದ್ದಿದ್ರೆ ಚೆನ್ನಾಗಿ ಇರುತಿತ್ತು. ನಿಮಗೆ ಎಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು. ನಾನು ಬೇಸಿಗೆ ರಜಕ್ಕೆ ನಿಮ್ಮನ್ನು ನೋಡಲು ಬರುತ್ತೀನಿ. ಅಜ್ಜಿ ಮರತುಬಿಟ್ಟೆ MKANT ಯುಗಾದಿ program ಅಲ್ಲಿ ನಾನು ನನ್ನ friends ಡಾಂಸ್ ಮಾಡುತ್ತಿದ್ದೀವಿ.

ಇಂತಿ ನಿಮ್ಮ ಪ್ರೀತಿಯ,
ವಾರುಣಿ



ದಿನಾಂಕ: ೨\೪\೧೪

ಸುಮಿತ್ರ ಲಂಕೆಟ್ಟಿ
#58, 15ನೇ ಮುಖ್ಯ ರಸ್ತೆ
ಬನಶಂಕರಿ, ಬೆಂಗಳೂರು-560050

ನನ್ನ ಪ್ರೀತಿಯ ಅಜ್ಜಿ ತಾತ,

ನಾವೆಲ್ಲ ಇಲ್ಲಿ ಕ್ಷೇಮ, ನೀವೆಲ್ಲ ಕ್ಷೇಮವೆ? ನಿಮಗೆಲ್ಲ ಯುಗಾದಿ ಹಬ್ಬದ ಶುಭಾಶಯಗಳು. ಅಮ್ಮ ಹೇಳಿದರು ಯುಗಾದಿ ಹಬ್ಬ ಕನ್ನಡಿಗರಿಗೆ ಹೊಸ ವರುಷ ಎಂದು. ಆದರೆ ಅಜ್ಜ ಜನವರಿ 1ನೆ ತಾರೀಕು ನಮಗೆಲ್ಲ ಹೊಸ ವರುಷ ತಾನೆ. ಅಜ್ಜಿ ಹಬ್ಬದ ದಿವಸ ಹೊಸ ಬಟ್ಟೆ ಹಾಕುತ್ತಾರೆ. ರಂಗೋಲಿ ಹಾಕಿ, ಹೂ ಇಟ್ಟು ದೇವರಿಗೆ ಪೂಜೆ ಮಾಡುತ್ತಾರೆ. ಸಂಜೆ ದೇವಸ್ಥಾನಕ್ಕೆ ಹೋಗುತ್ತೇವೆ. ಬೇವು ಬೆಲ್ಲ ಕೊಡುತ್ತಾರೆ, ನನಗೆ ಬೇವಿನ ರುಚಿ ಇಷ್ಟವಿಲ್ಲ, ಅದು ಕಹಿ. ಸೂರಜ್ ಬರೀ ಬೆಲ್ಲ ತಿನ್ನುತಾನೆ. ಒಬ್ಬಟ್ಟು ಮಾಡುತಾರೆ, (YUMMY) ನನ್ನ favorite ಸಿಹಿ ತಿಂಡಿ. ನಾನು, ಸೂರಜ್, ಅಜ್ಜಿ ಎಲ್ಲ ಮುಗಿಸಿ ಬಿಡುತ್ತೇವೆ.

ನಿಮ್ಮ ಪ್ರೀತಿಯ,
ದಿವ್ಯ



ಅರಳು ಮಲ್ಲಿಗೆ ಕನ್ನಡ ಶಾಲೆಯ ನಾಲ್ಕನೇ ತರಗತಿಯಲ್ಲಿ ಓದುತ್ತಿರುವ ಕೆಲವು ಮಕ್ಕಳು ತಮ್ಮ ಅಜ್ಜಿ ಮತ್ತು ತಾತಂದರಿಗೆ ಯುಗಾದಿ ಹಬ್ಬದ ಶುಭಾಶಯ ಕೋರುತ್ತ ಬರೆದಿರುವ ಪತ್ರಗಳು.

ಪ್ರಣವ್ ಶ್ರೀನಿವಾಸ್ ಕೊಪೆಲ್ — ೨-೪-೧೪

ಪ್ರೀತಿಯ ಅಜ್ಜ ಮತ್ತು ಅಜ್ಜಿ,

ಪ್ರಣವ್ ಮಾಡುವ ನಮಸ್ಕಾರ.

ನಿಮಗೆ ಉಗಾದಿ ಹಬ್ಬದ ಶುಭಾಶಯಗಳು. ಹೊಸ ವರುಷಕ್ಕೆ ಸ್ವಾಗತ.

ನನ್ನ ಕನ್ನಡ ಶಾಲೆ ಚನ್ನಾಗಿ ನಡೆಯುತ್ತಿದೆ, ಒತ್ತಕ್ಷರ ಕಲಿಯುತ್ತಿದ್ದೇನೆ. ನೀವು ಕಲಿಸಿದ ಚೌಕಬಾರ ನನಗೆ ಇಷ್ಟ. ಪ್ರಜಿತ್ ತುಂಬ ಒಳ್ಳೆಯ ತಮ್ಮ. ಅವನು ನನ್ನ ಜೊತೆ ಉಗಾದಿಯ ಡ್ಯಾನ್ಸ್‌ನಲ್ಲಿ ಇದ್ದಾನೆ.

ನಿಮ್ಮನ್ನು ದುಬೈಯಲ್ಲಿ ನೋಡಲು ಕಾಯುತ್ತಿದ್ದೇನೆ.


ನಿಮ್ಮ ಪ್ರೀತಿಯ, ಪ್ರಣವ್.



ಶ್ರೀ

ಪ್ರೀತಿಯ ಶಾಂತ ಅಜ್ಜಿ ಮತ್ತು ವಾಮನಭಟ್ಟ ತಾತನಿಗೆ ಅಮೋಘ ಮಾಡುವ ನಮಸ್ಕಾರಗಳು. ಇಲ್ಲಿ ನಾವು ಚೆನ್ನಾಗಿದ್ದೀವಿ. ನಿಮ್ಮ ಆರೋಗ್ಯ ಹೇಗೆ ಇದೆ.

ನಿಮ್ಮಿಬ್ಬರಿಗು ಯುಗಾಧಿ ಹಬ್ಬದ ಹಾರ್ದಿಕ ಶುಭಾಶಯಗಳು. ನಾನು ಇಲ್ಲಿ ಹಬ್ಬದ ದಿನ ಬೇವು ಬೆಲ್ಲ ತಿಂದು ಒಳ್ಳೆ ಒಳ್ಳೆ ಮಾತು ಆಡುತ್ತೀನಿ.



ನೀವು ಕಳುಹಿಸಿದ ರಾಮಾಯಣ ಮತ್ತು ಮಹಾಭಾರತ DVDಗಳು ತುಂಬ ಚೆನ್ನಾಗಿದೆ. ಬೇಸಿಗೆ ರಜೆಯಲ್ಲಿ ನಿಮ್ಮನ್ನು ನೋಡಲು ಕಾಯುತ್ತಿದ್ದೀನಿ.


ಇಂತಿ,
ಅಮೋಘ

ಪ್ರೀತಿಯ ತಾತ ಅಜ್ಜಿ,
ನೀವು ಹೇಗಿದ್ದೀರ?
ನಿಮ್ಮ ಹವಾಮಾನ ಹೇಗಿದೆ,
ಚಳಿನ ಅಥವ ಬಿಸಿನ?
ನಮ್ಮ ಹವಾಮಾನ ಚಳಿ ಮತ್ತು ಮಳೆ.
ನೀವು ನಮ್ಮ ಮನೆಯಿಗೆ ಯವಾಗ್ಲರೂ ಬನಿ.
ನಿಮಗೆ ಯುಗಾದಿ ಹಬ್ಬದ ಶುಭಾಶಯ ಗಳು.



ನಿಮ್ಮ ಪ್ರೀತಿಯ
ರಾಹುಲ್

Hooray! This was one of the most important six minutes of my life! My dance recital! I was so excited. I almost felt like I could fly. I was jumping up and down like crazy. I was dancing to an Indian song. I could hardly wait. "Come on" I urged my mom, Help me put on my my make up. "Okay, in a minute and calm down," my mom told me. "But Mommy, I want to do it now," I complained. I shouted and jumped up and down like a two year old. "Fine," she said, "lets go." Satisfied, I ran in front of her. She put eyeliner, lipstick and eyeliner on me. "You look so cute", She squealed in delight. "I do look fabulous," I said as I turned to the mirror. I was walking backstage very calmly but inside I felt very jumpy. "This is it," I whispered to myself. I was anxiously waiting by the side of the stage. I was feeling very nervous when, all of a sudden, my whole body felt really, really stiff. Oh no, Oh no, I thought to myself until I saw my brother Pranav waving to me. I felt much better knowing my family was out there for me. It was finally time. I walked on stage with all of the other girls. The dance was huge success. The audience burst in to applauds! It was the time of my life.








Pragnya Kaginele



Stuthi Sunil

## "Importance of Bindhi"

A bindhi is something that traditionaly Indian women wear between their two eyebrows. The word bindhi in sanskrit means bindhi or a drop. When you wear your bindhi you wear it between your two eyebrows because it is considered a major nerve point in the human body since ancient times. Women wear bindhis because they believe it gives a good fortune. The bindhi is belived to prevent the loss of energy as well as bringing spiritual protection against demons or bad luck. Usually the bindhi's color is red. The red kumkum between the eyebrows is said to retain energy in the human body and control the various levels of concentration.

Stuthi Sunil
2nd grade



## ಸ್ಕೌಟ್ಸ್

— ಅರ್ಣವ್ ಕಶ್ಯಪ್

ನನಗೆ ತುಂಬ ಇಷ್ಟವಾದ ಹವ್ಯಾಸ ಎಂದರೆ ಸ್ಕೌಟ್ಸ್. ನಾನು ಸ್ಕೌಟ್ಸ್‌ನಲ್ಲಿ ತುಂಬ ಕಲಿತಿದ್ದೂ ಹೌದು, ಮಜಾ ಮಾಡಿದ್ದೂ ಹೌದು. ನಾನು ಸ್ಕೌಟ್ಸ್‌ನಲ್ಲಿ ಎಲ್ಲಾದಕ್ಕಿಂತ ಇಷ್ಟ ಪಡೋದು ಕ್ಯಾಂಪ್. ನಾನು ಕ್ಯಾಂಪ್‌ನಲ್ಲಿ ಹೈಕಿಂಗ್ ಹಾಗು ಅಡಿಗೆ ಮಾಡುತ್ತೇನೆ. ಎಲ್ಲಾ ಕ್ಯಾಂಪ್‌ಗು ಒಂದು ಉದ್ದೇಶ ಇರುತ್ತದೆ. ಒಂದು ಕ್ಯಾಂಪಿನಲ್ಲಿ, ನಾನು ಬಂಡೆ ಹತ್ತಿದೆ, ಇನ್ನೊಂದರಲ್ಲಿ ನಾನು ಬಿಲ್ಲುಗಾರಿಕೆಯನ್ನು ಮಾಡಿದೆ. ಎಲ್ಲಾ ಕ್ಯಾಂಪ್‌ಗಳಲ್ಲಿ ನನ್ನ ಮೆಚ್ಚಿನ ಕ್ಯಾಂಪ್ ರಾಕೆಟ್ ಕ್ಯಾಂಪ್. ನಮ್ಮ ಟ್ರೂಪ್ ಕಾಡಿಗೆ ಹೋಗಿ ರಾಕೆಟನ್ನ ಹಾರಿಸಿದೆವು. ನಾನು ಎಲ್ಲರಿಗೂ ಸ್ಕೌಟ್ಸ್ ಸೇರಿ ಅಂತ ಹೇಳುತ್ತೇನೆ.



## Tofu Masala Curry

Madhavi Venkatesh






**Ingredients:**

- Extra firm Tofu- 10 oz/280 gms (Cut to cube size pieces)
- Green bell pepper- 1 thinly sliced
- Medium onion- 1 thinly sliced
- Red juicy tomato- 2 chopped
- Ginger garlic paste- 1 tsp
- cashew- about 10
- Tomato paste - 1 tsp
- Bay leaf -2
- Cloves-2
- Cinnamon stick -1
- Powdered Coriander leaves - 1tsp
- Garam masala - 1/2 tsp
- Turmeric powder- 1/4th tsp
- Red chilly powder - 1/2 tsp or to taste
- A generous pinch of Kasoori methi
- Milk - 1 cup ( at room temperature)
- Water for the gravy
- Lemon juice to taste
- Salt to taste
- Sugar - 1/4th tsp (optional)
- Chopped Coriander leaves - 1 tbsp

**Procedure:**

Pat the tofu dry with few paper towels. Cut to cube size pieces and pan fry them till light brown. Set a side.

In a skillet add the onion and fry till translucent. Add the chopped tomato and cook till soft. Transfer the mixture to a grinder. Add the cashew, coriander leaves and some water. Grind to a smooth paste. Set a side.

In a wide skillet add the oil, followed by bay leaves, cloves, Cinnamon. Fry for few seconds. Add the bell pepper, turmeric powder and some salt. Saute for few minutes.

Add the ginger garlic paste. Fry for 30 seconds. Now add the coriander powder, garam masala and red chilly powder. Fry for few seconds.

Now add the tomato paste and mix.Add the ground paste, kasoori methi , milk and necessary water to get the gravy consistency . Simmer for few minutes. Check the seasoning and adjust accordingly.

Add the pan fried tofu, sugar and let the curry simmer for ten minutes in a low flame. Finally add the lemon juice and turn off the heat.

Serve Tofu masala curry with Nan or roti!

## ಓಟ್ಸ್-ರವೆ ಇಡ್ಲಿ

- ಪೂರ್ಣಿಮ ಸುಬ್ರಹ್ಮಣ್ಯ



ಸಾಮಗ್ರಿಗಳು:

1 ಕಪ್ ಉಪ್ಪಿಟ್ಟಿನ ರವೆ - ಘಮ ಬರುವವರೆಗೆ ಹುರಿದದ್ದು

1 ಕಪ್ Quaker Quick oats - ಸ್ವಲ್ಪ ಘಮ ಬರುವಷ್ಟು ಹುರಿದು, ತರಿ ಮಾಡಿಕೊಳ್ಳುವುದು

ಅಂದಾಜು 1 1/2 ಕಪ್ ಮೊಸರು

1 ಕ್ಯಾರಟ್ - ತುರಿದದ್ದು

1/8 ಕಪ್ ಬಟಾಣಿ (ಬೇಕಾದರೆ ಮಾತ್ರ)

ಸಾಸಿವೆ - 2 ಹಸಿಮೆಣಸಿನಕಾಯಿ ಒಗ್ಗರಣೆ , ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು

1/2 tbsp ಉಪ್ಪು

1/2 tsp Eno salt

1/4 tsp ಸೋಡಾ (ಮೊಸರು ಹುಳಿ ಇಲ್ಲದೇ ಇದ್ದರೆ, ಅಥವಾ ಆಗ ತಾನೇ ಫ್ರಿಜ್ ನಿಂದ ಹೊರಗೆ ತೆಗೆದಿದ್ದರೆ ಮಾತ್ರ )

ವಿಧಾನ: ಎಲ್ಲ ಸಾಮಗ್ರಿಗಳನ್ನೂ ಕಲಸಿ, ಇಡ್ಲಿ ತಟ್ಟೆಗೆ ಹಾಕಿ 15-18 ನಿಮಿಷ ಹಬೆಯಲ್ಲಿ ಬೇಯಿಸುವುದು.

ಇಷ್ಟು ಸಾಮಗ್ರಿಗೆ ಒಟ್ಟು 15-16 ಇಡ್ಲಿ ಆಗುತ್ತದೆ.




ಮುಂದಿನ ಸಂಚಿಕೆಯನ್ನು ದೀಪಾವಳಿ -2015 ವೇಳೆಗೆ ಸಿದ್ಧಪಡಿಸಲಾಗುವುದು.ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು kampu.mkant@gmail.com ವಿಳಾಸಕ್ಕೆ ಕಳುಹಿಸಿ.